# ಸತ್ಯಮೇವ ಜಯತೇ

**ಎಸ್.ಎಸ್.ಕುಮಾರಿ**

ಅನ್ಯಾಯಕ್ಕೆ ಒಳಗಾಗಿದ್ದ ನಿಷ್ಠಾವಂತ ಅಧಿಕಾರಿಯೊಬ್ಬನು ಅನಿರೀಕ್ಷಿತ ರೀತಿಯಲ್ಲಿ ನ್ಯಾಯವನ್ನು ದೊರಕಿಸಿಕೊಂಡ ಸ್ವಾರಸ್ಯಕರ ಘಟನೆಯನ್ನು ವಿವರಿಸಿರುವ ಎಸ್.ಎಸ್. ಕುಮಾರಿ ಯವರು ವೃತ್ತಿಯಲ್ಲಿ ವಕೀಲರು ಮತ್ತು ಬೆಂಗಳೂರಿನ ಶ್ರೀರಾಮ ಕೃಷ್ಣ ಆಶ್ರಮದ ಭಕ್ತರು.

---

**ಅಂದು** ಸಂಜೆ ಆಫೀಸಿನ ಕೆಲಸದಲ್ಲಿ ತೊಡಗಿದ್ದಾಗ ಆಪ್ತ ವಕೀಲರೊಬ್ಬರು ಆಗಂತುಕನೊಡನೆ ಆಗಮಿಸಿದರು. ವ್ಯಾವಹಾರಿಕ ಮಾತುಕತೆಯಾದ ಮೇಲೆ ಆಗಂತುಕನನ್ನು ಪರಿಚಯಿಸುತ್ತಾ ಆತನ ಸಮಸ್ಯೆಯ ಬಗ್ಗೆ ತಿಳಿಸಿದರು. ಅವನ ಕಡತವನ್ನು ತಿರುವಿಹಾಕಿದೆ.

ಒಬ್ಬ ಪ್ರಥಮ ದರ್ಜೆಯ ನಿಷ್ಠಾವಂತ, ಪ್ರಾಮಾಣಿಕ ಸರ್ಕಾರಿ ಅಧಿಕಾರಿ. ೧೦ ವರ್ಷಗಳ ಅನುಭವ. ಪ್ರತಿ ಮೂರು ನಾಲ್ಕು ತಿಂಗಳಿಗೊಮ್ಮೆ ವರ್ಗಾವಣೆ. ಬೆಂಗಳೂರು ಜಿಲ್ಲೆಯಲ್ಲಿರುವಾಗ ಸರ್ಕಾರಕ್ಕೆ ಬರಬೇಕಾದ ಸುಮಾರು ೧೫ ವರ್ಷಗಳಿಂದ ಬಾಕಿ ಇರುವ ಲಕ್ಷಾಂತರ ರೂಪಾಯಿಗಳನ್ನು, ಅಧಿಕಾರಕ್ಕೆ ಬಂದ ೧೫ ದಿನ ಗಳಲ್ಲಿಯೇ ವಸೂಲಿ. ಪರಿಣಾಮ, ಕೂಡಲೇ ಬೆಂಗಳೂರಿನಿಂದ ವರ್ಗಾವಣೆ, ಜೊತೆಗೆ ಸಂಬಳದಲ್ಲಿ ಕಡಿತ.

ಸಮಸ್ಯೆ ಅರ್ಥವಾಯಿತು. ಕೇಸು ದಾಖಲಾಯಿತು. ಸಂಬಳದ ಕಡಿತಕ್ಕೆ ತಡೆಯಾಜ್ಞೆಯೂ ಬಿತ್ತು. ಇಷ್ಟಕ್ಕೇ ಸಮಸ್ಯೆ ಬಗೆಹರಿಯ ಲಿಲ್ಲವಲ್ಲಾ. ವಿಚಾರಣೆಯಾಗಬೇಕು.

ಹೊಸ ಸಮಸ್ಯೆ ಇಲ್ಲಿ ಉದ್ಭವವಾಯಿತು. ವಿಚಾರಣೆಯ ದಿನ ಬಂದೇ ಬಿಟ್ಟಿತು. ಕಕ್ಷಿಗಾರನಿಗೂ ಸಮಸ್ಯೆಯ ಮನವರಿಕೆಯಾಗಿತ್ತು. ಎಷ್ಟೇ ಹೇಳಿದರೂ ಆತ ವಿಚಾರಣೆಯ ದಿನ ನ್ಯಾಯಾಲಯದಲ್ಲಿ ಹಾಜರಿರಲು ಒಪ್ಪಲಿಲ್ಲ. ನನ್ನ ಮೇಲೆಯೇ ಸಂಪೂರ್ಣ ಭಾರವನ್ನು ಹೇರಿ ಹೊರಟೇ ಹೋದ. ನನ್ನ ಮನಸ್ಸಿಗೆ ಇನ್ನೂ ಹೆಚ್ಚಿನ ಹೊರೆಯ ಅನುಭವವಾಯಿತು.

ಅಂದು ಇಡೀ ರಾತ್ರೆ ನಿದ್ದೆ ಬರಲಿಲ್ಲ. ನನ್ನಿಂದ ನ್ಯಾಯ ದೇವಿಯ ಪೂಜೆಗೈಯುವ ಪವಿತ್ರ ವಸ್ತ್ರಗಳಿಗೆ ಸಂಪೂರ್ಣ ನ್ಯಾಯ ವೆಸಗಲು ಸಾಧ್ಯವಾಗುತ್ತದೆಯೇ? ಬದಲಾಗುವ ವಿದ್ಯಮಾನಗಳಿಗೆ ಸಮರ್ಪಕವಾಗಿ ಸ್ಪಂದಿಸುವ ಸಾಮರ್ಥ್ಯವಿದೆಯೇ? ದೋಷವು ಹರಿಯುತ್ತಿರುವ ಸಮಾಜದಲ್ಲಿದೆಯೇ ಅಥವಾ ನೋಡುವ ನನ್ನ ದೃಷ್ಟಿಕೋನದಲ್ಲಿದೆಯೇ? ವಿಪರೀತವಾಗುತ್ತಿರುವ ಸಮಸ್ಯೆಗಳಿಗೆ ಕಾರಣವೇನು? ನೀತಿ, ನಿಷ್ಠೆ, ಪ್ರಾಮಾಣಿಕತೆ, ವೃತ್ತಿಧರ್ಮ, ಕರ್ತವ್ಯ ಪರಾಯಣತೆ ಎಂಬೆಲ್ಲಾ ಶಬ್ದಗಳು ನಿಘಂಟಿನಲ್ಲಿ ಕೂತು, ಕೊಳೆತು, ತೂಕಡಿಸುತ್ತಾ ತುಕ್ಕು ಹಿಡಿಯುತ್ತಿವೆಯಲ್ಲಾ? ಇವು ಎಂದು ಜೀವಂತ ವಾಗಬಲ್ಲವು? ಈ ಭದ್ರ ಬುನಾದಿಯ ಗುಣಗಳೇ ಅಭದ್ರವಾಗಿ ಇಂತಹ ದುಃಸ್ಥಿತಿಗೆ ಒಳಗಾದರೆ ಭವಿಷ್ಯದ ಪಾಡೇನು? ದಿಕ್ಕು ತೋಚದೆ ತೊಳಲಾಡುತ್ತಿದ್ದೆ. ಬುದ್ಧಿಯು ತಾನು ಕರ್ಮಾನುಸಾರಿಣಿ ಯಾದರೂ ಪಂಡಿತನಂತೆ 'ಇದಕ್ಕೆಲ್ಲಾ ನಾನು ಹೊಣೆಯೇ? ನಾನೇನು ಮಾಡಲು ಸಾಧ್ಯ? ಅದು ನನ್ನ ಪರಿಮಿತಿಯ ಕೆಲಸವಲ್ಲ. ನಾನೇಕೆ ಚಿಂತಿಸಬೇಕು? ನಾನು ಮಾಡಬೇಕಾದುದು ಸಮುದ್ರ ಮಥನ. ಕಾಲ ಗರ್ಭದ, ಧರ್ಮದಾಳದ, ಕರ್ಮಸಂಚಿತದಿಂದ ಏನೇನು ಆಗಮಿಸು ವುದೋ? ಪ್ರಾರಬ್ಧವನ್ನು ಬದಲಾಯಿಸಲು ನಾನಾರು? ಕುರು-ಪಾಂಡವ ಕಾಳಗದಲ್ಲಿ ಶರಶಯ್ಯೆಯು ಹೊರಬರಲಿಲ್ಲವೇ? ಲಲಾಟ **ಲಿಖಿತಾ ರೇಖಾ ಅಪಹರ್ತುಂ ನ ಹಿ ಶಕ್ಯತೇ**—(ಹಣೆಯ ಬರಹವನ್ನು ಅಳಿಸಲು ಯಾರಿಗೆ ತಾನೆ ಸಾಧ್ಯ?) ಇಂತಹ ಅನುಭವ ಎಷ್ಟಿಲ್ಲ? ಮೂಲ ವಸ್ತುವನ್ನು ಕಾನೂನಿನ ಮೂಸೆಯಲ್ಲಿ ಕಾಯಿಸಿ ಸಂಸ್ಕರಿಸುವು ದಷ್ಟೇ ನನ್ನ ಕೆಲಸ. ನಾನು ಕೇವಲ ನಿಮಿತ್ತ, ಕರ್ಮಣ್ಯೇವಾಧಿಕಾರಸ್ತೇ (ಕರ್ಮದಲ್ಲಿಮಾತ್ರ ನಿನಗೆ ಅಧಿಕಾರ)—ಎಂಬುದು ಮನಸ್ಸನ್ನು ಮೊಟಕುತ್ತಲೇ ಇತ್ತು. ಇನ್ನು ಮನಸ್ಸು, ಶ್ರೀಮಾನ್ ಮಹಾಮಹಿಮ ಮಾರುತಿರಾಯರ ಮೊಮ್ಮಗ. ಕೇಳಬೇಕೆ? ಭರತಮುನಿಯ ನಾಟ್ಯ ಶಾಸ್ತ್ರವನ್ನು ನಾನಾಭಂಗಿಗಳಲ್ಲಿ ಭರದಿಂದ ಅನುಭವದ ವೇದಿಕೆಯ ಮೇಲೆ ಅಭ್ಯಾಸ ಮಾಡುತ್ತಿತ್ತು. ಮನೋಬುದ್ಧಿಗಳ ಮದ್ದಲೆಯ ಗದ್ದಲದ ಸದ್ದಿಗೆ ನಿದ್ದೆ ಬಾರದೆ ಬಿದ್ದು ಚಟಪಡಿಸುತ್ತಾ ಒದ್ದಾಡುತ್ತಿದ್ದೆ.

ಬೆಳಗಾಯಿತು. ಆಕಾಶವಾಣಿಯಿಂದ ಜೇನುಹನಿ ಜಿನುಗಿತು.

ಇನ್ನೇನು ಮತ್ತೇನು ಗತಿಯೆಂದು ಬೆದರದಿರು.  
ನಿನ್ನ ಕೈಯೊಳಗಿಹುದೇ ವಿಧಿಯ ಲೆಕ್ಕಣಿಕೆ ?  
ಕಣ್ಣಿಗೆಟಕದ ಸಾಗುತಿಹುದು ದೈವದ ಸಂಚು  
ತಣ್ಣಗಿರಿಸಾತ್ಮವನು ಮಂಕುತಿಮ್ಮ.

ನಿಜ. ವಿಧಿಯ ಲೆಕ್ಕಣಿಕೆ ಯಾರ ಕೈಯಲ್ಲಿಯೂ ಇಲ್ಲ. ಆದರೆ, ಇಂತಹ ನಾನಾ ಲೆಕ್ಕಣಿಕೆಯ ರುಚಿ ಉಂಡ ಮನಸ್ಸು ಒಪ್ಪಬೇಕಲ್ಲಾ? ಸಮಾಧಾನವಾಗಲಿಲ್ಲ.

ನಿತ್ಯಕರ್ಮಗಳೆಲ್ಲಾ ಮುಗಿದವು. ಆಫೀಸಿಗೆ ಆಗಮಿಸಿ ಆಯಿತು. ಅಲ್ಲಿಯೂ ಹಾಡು ಕೇಳಿ ಬರುತ್ತಿತ್ತು. 'ತಲ್ಲಣಿಸದಿರು ಕಂಡ್ಯ, ತಾಳು ಮನವೇ' —ಇದು ಸಾಧ್ಯವೇ?

ಬೇರೆ ಬೇರೆ ಕೆಲಸಗಳನ್ನು ಗಮನಿಸುತ್ತಿದ್ದರೂ ಮನದಲ್ಲಿ ಇದು ಕೊರೆಯುತ್ತಲೇ ಇತ್ತು. ಬಂದ ಕಕ್ಷಿಗಾರರಿಗೆಲ್ಲಾ ಅವರವರ ನ್ಯಾಯಾಂಗಣದಲ್ಲಿರಲು ಹೇಳಿ ಹೊರಟಾಯಿತು.

ಮನಸ್ಸಿನ ವಿಷಯ ಕೊನೆಕಾಣದೆ ಬಿಟ್ಟೀತೇ? ಬೇರೆಲ್ಲಾ ಕೆಲಸಗಳನ್ನು ಬೇಗ ಬೇಗನೆ ಮುಗಿಸಿಕೊಂಡು ಈ ಕೇಸಿಗೆ ಸ್ವಲ್ಪ ವಿಶೇಷವಾಗಿ ಬಿಡುವು ಮಾಡಿಕೊಂಡೇ ನ್ಯಾಯಾಂಗಣ ಪ್ರವೇಶಿಸಿದೆ. ಮನಸ್ಸು ಆತಂಕದಿಂದ ತುಂಬಿಹೋಗಿತ್ತು. ಹಿರಿಯ, ಕಿರಿಯ, ನ್ಯಾಯ ವಾದಿಗಳಿಂದ ಕಕ್ಷಿಗಾರರಿಂದ ನ್ಯಾಯಾಂಗಣ ಕಿಕ್ಕಿರಿದು ತುಂಬಿತ್ತು.

ಕೊನೆಗೆ ಆ ಘಳಿಗೆ ಬಂದೇ ಬಿಟ್ಟಿತು. ಕೇಸನ್ನು ಕರೆದಾಯಿತು.

ಸುಮ್ಮನೆ ಎದ್ದು ನಿಂತು ಕಡತದ ಗಂಟನ್ನು ಬಿಡಿಸುತ್ತಿದ್ದೆ. ವಿರೋಧ ಪಕ್ಷದ ವಕೀಲರು ಒಂದೇ ಸಮನೆ ಸಮಯಯಾಚನೆ ಗೈಯುತ್ತಿದ್ದರು. ಸಾಹೇಬರು ಒಂದೊಂದೇ ಪುಟಗಳನ್ನು ತಿರುವುತ್ತಾ ತಲೆ ಆಡಿಸುತ್ತಿದ್ದರು. ಕೊನೆಗೆ ವಿರೋಧ ಪಕ್ಷದ ವಕೀಲರು ಹೇಳಿದರು : 'ಸ್ವಾಮಿ, ಈ ಅರ್ಜಿ ಸಂಪೂರ್ಣ ಊರ್ಜಿತವಾಗಬೇಕು. ಇದರಲ್ಲಿ ಯಾವ ಲೋಪದೋಷಗಳೂ ಇಲ್ಲ. ನಾನು ಕೇವಲ ವ್ಯಾವಹಾರಿಕವಾಗಿ ಒಂದು ತಕರಾರು ಅರ್ಜಿಯನ್ನು ಸಲ್ಲಿಸುತ್ತೇನೆ. ದಯವಿಟ್ಟು ಒಂದು ವಾರ ಕಾಲಾವಕಾಶ ಕೊಡಿ.' ತಕ್ಷಣ ನಾನು ಬಿಡಿಸಿದ್ದ ಕಡತದ ಗಂಟನ್ನು ಭದ್ರಪಡಿಸಿ ಕುಳಿತೇ ಬಿಟ್ಟೆ, 'ಚ'ಕಾರ ಎತ್ತಲಿಲ್ಲ.

ಸ್ಮಶಾನದಲ್ಲಿ ಹರಿಶ್ಚಂದ್ರನು ತಾರಾಮತಿಯನ್ನು ಕೊಲ್ಲಲು ಮೇಲೆತ್ತಿದ್ದ ಖಡ್ಗವು ಹೂವಿನ ಹಾರವಾದುದರ ನೆನಪಾಯಿತು. ಹಾವಾಗಿದ್ದ ಹೆದರಿಕೆಯು ಹೂವಾಗಿ ಪರಿಣಮಿಸಿತು.

ಯೂಪಸ್ತಂಭದ ಮೇಲೆ ಇರಿಸಿದ ಬಲಿ ಪಶುವನ್ನು ಕೊಲ್ಲಬಯಸಿ ಮೇಲೇರಿದ ಖಡ್ಗವು ಸಹ ಕೆಳಗಿಳಿದು ಕೊಲ್ಲಬೇಕಾದರೆ ಅವನ ಆಣತಿ ಇರಲೇಬೇಕೆಂಬುವುದು ಎಷ್ಟೊಂದು ಸತ್ಯ!

**ತೇನ ವಿನಾ ತೃಣಮಪಿ ನ ಚಲತಿ.** ನಾವೇನೇ ಮಾಡಬಯಸಿದರೂ ನಡೆಯುವುದು ಅವನ ಆಣತಿಯಂತೆಯೇ ಎಂಬುವುದಕ್ಕೆ ಇದಕ್ಕಿಂತಲೂ ಹೆಚ್ಚಿನ ಜೀವಂತ ನಿದರ್ಶನ ಬೇಕೇ? ನಂಬಿದರೆ ನಂಬಿ ಬಿಟ್ಟರೆ ಬಿಡಿ. ನಾನು ಒಂದೇ ಒಂದು ಶಬ್ದವನ್ನೂ ಮಾತನಾಡಲಿಲ್ಲ. ನಿಶ್ಶಬ್ದ ಬ್ರಹ್ಮನಂತಿದ್ದೆ. ನಿಷ್ಠಾವಂತ ಅಧಿಕಾರಿಯ ನಿಷ್ಠೆಯು ಎಂತಹ ಸೂಕ್ಷ್ಮ ಸಂದಿಗ್ಧ ಸಂದರ್ಭದಲ್ಲಿಯೂ ಸಂಪೂರ್ಣವಾಗಿ ಅವನನ್ನು ಕಾದಿತ್ತು. **ಧರ್ಮೋ ರಕ್ಷತಿ ರಕ್ಷಿತಃ** ನೀನು ನನಗಿದ್ದರೆ ನಾನು ನಿನಗೆ.ಇನ್ನು ಪರಿಣಾಮ ಬೇರೆ ಹೇಳಬೇಕೆ? **'ಸತ್ಯಮೇವ ಜಯತೇ'** ✲

# ಸ್ವಾಮಿ ವಿವೇಕಾನಂದರ ದಿವ್ಯಸ್ಮೃತಿ

ಸ್ವಾಮಿ ವಿವೇಕಾನಂದರು ಲಾಸ್ ಏಂಜಲಿಸ್‌ನಲ್ಲಿ ಉಪನ್ಯಾಸ ನೀಡುತ್ತಿದ್ದಾಗ ನಾನಲ್ಲಿದ್ದುದು ನನ್ನ ಮಹಾ ಸೌಭಾಗ್ಯ. ಅವರು ಮಾತನಾಡುತ್ತಿದ್ದ ವಿಷಯ ಆಗ ನನಗೆ ಹೊಸತಾದರೂ ನಾನು ಮಂತ್ರಮುಗ್ಧನಾಗಿ ಕೇಳುತ್ತಿದ್ದೆ. ಮುಂದೆ ಅವರು ಸ್ಯಾನ್ ಫ್ರಾನ್‌ಸಿಸ್ಕೊ, ಓಕ್‌ಲ್ಯಾಂಡ್ ಮತ್ತು ಅಲಮೇಡದಲ್ಲಿ ಮಾತನಾಡುತ್ತಿದ್ದಾಗಲೂ ಅಲ್ಲಿಗೆ ಹೋಗಿ ತಪ್ಪದೆ ಪ್ರತಿಯೊಂದು ಉಪನ್ಯಾಸವನ್ನೂ ಕೇಳಿದೆ.

ಸ್ವಾಮೀಜಿಯವರು ಮುಂದುವರಿದ ವಿದ್ಯಾರ್ಥಿಗಳಿಗಾಗಿ ಒಂದು ಸಂಜೆ ಮಾತನಾಡುತ್ತಾರೆ ಎಂದು ಒಮ್ಮೆ ಪ್ರಕಟಿಸಲಾಯಿತು. ನಾನು ಭಾಗವಹಿಸಲು ತುಂಬ ಉತ್ಸುಕನಾಗಿದ್ದೆ. ಸ್ವಾಮೀಜಿಯವರ ಕಾರ್ಯದರ್ಶಿ (ಶ್ರೀಮತಿ ಹ್ಯಾನ್ಸ್‌ಬ್ರೊ) ಅವರಿಗೆ ಅನುಮತಿಗಾಗಿ ಬರೆದೆ, ಮತ್ತು ನಾನು ಮುಂದುವರಿದ ವಿದ್ಯಾರ್ಥಿಯಲ್ಲವೆಂದೂ ಪತ್ರದಲ್ಲಿ ಸೂಚಿಸಿದ್ದೆ. ಹಾಗಾದರೆ ಭಾಗವಹಿಸದಿರುವುದೇ ಒಳ್ಳೆಯದೆಂದು ಉತ್ತರ ಬಂತು. ನನಗೆ ತೃಪ್ತಿಯಾಗದೆ ನೇರವಾಗಿ ಸ್ವಾಮೀಜಿಯವರಿಗೇ ಅನುಮತಿಗಾಗಿ ಬರೆದೆ. ಅವರು ಅತ್ಯಂತ ಸಂತೋಷದಿಂದ ಒಪ್ಪಿಗೆಯಿತ್ತರು :'ಬನ್ನಿ. ನಿಮಗೆ ಸ್ವಾಗತ, ಸ್ವಾಗತ, ಸ್ವಾಗತ!'

ವಿವೇಕಾನಂದರ ಉಪನ್ಯಾಸ ಬೌದ್ಧಿಕ ಮತ್ತು ಆಧ್ಯಾತ್ಮಿಕ ಔತಣವೇ ಆಗಿತ್ತು. ಆಲೋಚನೆಯ ಮತ್ತು ಭಾವನೆಯ ಉನ್ನತ ಭೂಮಿಯನ್ನು ತಲುಪಿದಂತೆ ನಮಗೆ ಅನುಭವವಾಯಿತು.

ಆ ಸಂಜೆಯ ಕೊನೆಯ ಭಾಗ ಧ್ಯಾನಕ್ಕೆ ಮೀಸಲಾಗಿತ್ತು. ಸ್ವಾಮೀಜಿ ಧ್ಯಾನದಲ್ಲಿ ತಲ್ಲೀನರಾಗಿ ಬಾಹ್ಯಪ್ರಪಂಚದಿಂದ ಸಂಪೂರ್ಣ ದೂರವಾಗಿಬಿಟ್ಟರು. ಅವರ ಸುತ್ತಲೂ ದಿವ್ಯಸ್ಪಂದನ ಆವರಿಸಿತು. ಆ ಸ್ಪಂದನ ನಮ್ಮೊಳಗನ್ನೂ ಪ್ರವೇಶಿಸಿತು. ಅನಂತರ ನಾವು ಮನೆಗೆ ಹಿಂತಿರುಗಿದೆವು. ನಮ್ಮ ಪಾದ ನೆಲಕ್ಕೆ ತಾಕುತ್ತಿರುವಂತೆ ಅನಿಸಲಿಲ್ಲ. ಸ್ವಾಮೀಜಿಯವರು ನಮಗೆ ದಿವ್ಯಾಮೃತವನ್ನು ಕುಡಿಯಲು ಕೊಟ್ಟಂತೆ ಅನುಭವವಾಯಿತು.

—ಅನಾಮಿಕ

(ಮೇರಿ ಲೂಯಿ ಬರ್ಕ್ ಅವರ *Swami Vivekananda in the West: New Discoveries* ಗ್ರಂಥದಿಂದ, ಸಂಪುಟ ೬, ಪುಟ. ೭-೮) ✡